(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಪಶು ಸಂಗೋಪನಾ ಸಚಿವರು ಉತ್ತರ ಕೊಡಿ.

ಶ್ರೀ ರೇವುನಾಯಕ್ ಬೆಳಮಗಿ:– ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ:– ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು:– ತಾರತಮ್ಯ ಆಗದ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ಹೇಳಲಾಗಿದೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ:– ಅನುದಾನವನ್ನು ಬಿಡುಗಡೆ ಮಾಡಲಾಗುವುದೇ ಎಂದು ಕೇಳಿದಾಗ, ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಗ್ರಂಥಾಲಯಗಳಿಗೆ ನಿವೇಶನವನ್ನು ಒದಗಿಸುವಂತೆ ಕೋರಿದ್ದಾರೆ. ಈಗಾಗಲೇ ನಿವೇಶನವನ್ನು ಪಟ್ಟಣ ಪಂಚಾಯಿತಿಯಿಂದ ಒದಗಿಸಲಾಗಿದೆ. ದಯವಿಟ್ಟು ಮಾನ್ಯ ಸಚಿವರು ಈ ಒಂದು ತಾಲ್ಲೂಕು ಮಟ್ಟದ ಗ್ರಂಥಾಲಯವನ್ನು ನಿರ್ಮಾಣ ಮಾಡಲು ಅದಕ್ಕೆ ಬೇಕಾದಂತಹ ಅನುದಾನವನ್ನು ಒದಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ:– ಗೌರವಾನ್ವಿತ ಸದಸ್ಯರು ಕೇಳಿರುವ ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸ್ವಂತ ಕಟ್ಟಡ ನಿರ್ಮಿಸಲು ನಿವೇಶನ ಒದಗಿಸುವಂತೆ ಪಟ್ಟಣ ಪಂಚಾಯಿತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ನಿವೇಶನ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದರ documents ರೆಡಿ ಮಾಡಿ ಕೊಟ್ಟರೆ next ಆಯವ್ಯಯದಲ್ಲಿ ಸೇರಿಸಿ sanction ಮಾಡಿಕೊಡುತ್ತೇನೆ.

ಉಪಾಧ್ಯಕ್ಷರು:– ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡರ ಪ್ರಶ್ನೆಗೆ ಮಾನ್ಯ ಸಚಿವರು 30 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ನಿಷ್ಕ್ರೀಯವಾಗಿದೆ. ಮಾನ್ಯ ಶಿಕ್ಷಣ ಸಚಿವರು ನಿಷ್ಕ್ರೀಯರಾಗಿದ್ದಾರೆ. ಒಂದು ತಿಂಗಳ ಕಾಲಾವಕಾಶ ಏಕೆ ಬೇಕು. ಇವರು ಮುಖ್ಯಮಂತ್ರಿಗಳ O.M. (order) ಅನ್ನು obey ಮಾಡದಿದ್ದರೆ ನಮಗೆ ಇಂತಹ ಶಿಕ್ಷಣ ಸಚಿವರು ಏಕೆ ಬೇಕು?

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಇಂತಹುದಕ್ಕೆ ನಮಗೆ ಶಿಕ್ಷಣ ಸಚಿವರು ಬೇಕಾ? ಒಳ್ಳೆಯ ಪದವಿಯಲ್ಲಿಲ್ಲವಾ? ಶಿಕ್ಷಣ ಸಚಿವರಿಗೆ ಬಹಳ ದುರಹಂಕಾರ, ಇವರಿಗೆ ಕನ್ನಡದ ಬಗ್ಗೆ ತಾತ್ಸಾರ, ಕೀಳರಿಮೆ ಏಕೆ? ಒಂದು ತಿಂಗಳು ಬೇಕಾ ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ? ಈ ಬಗ್ಗೆ ಕೋರ್ಟಿಗೆ ಹೋದರೆ ಇವರ ಜನ್ಮ ಜಾಲಾಡುತ್ತಾರೆ. ಏತಕ್ಕೆ ಬೇಕು? ಕೆಲಸಕ್ಕೆ ಬಾರದವರೆಲ್ಲರೂ ಶಿಕ್ಷಣ ಸಚಿವರಾಗುತ್ತಾರೆ. ಶಿಕ್ಷಣವೇ ಗೊತ್ತಿಲ್ಲ. (xxx).

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಮಾತಿನ ಬಗ್ಗೆ ಗೌರವವಿರಬೇಕು. ಸದನ ನಡೆಯುತ್ತಿದೆ. ನೀವು ಏಕೆ ಈ ರೀತಿ ಮಾತಾಡುತ್ತೀರಿ?

ಉಪಾಧ್ಯಕ್ಷರು:– (xxx) ಎಂಬ ಶಬ್ದವನ್ನು ಕಡತದಿಂದ ತೆಗೆದು ಹಾಕಲಾಗಿದೆ. ಶಂಕರಲಿಂಗೇಗೌಡರೆ, ನಿಮ್ಮ ಅತೃಪ್ತಿಯನ್ನು ಬೇರೆ ರೀತಿಯಲ್ಲಿ ಹೇಳಲಿಕ್ಕೆ ಅವಕಾಶವಿದೆ. (xxx) ಶಬ್ದವನ್ನು ಕಡತದಿಂದ ತೆಗೆದುಹಾಕಲಾಗಿದೆ. ಮಂತ್ರಿಗಳೇ ಉತ್ತರ ಹೇಳಿ.

ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ:– ಮಾನ್ಯ ಅಧ್ಯಕ್ಷರೆ...

(ಗೊಂದಲ)

ಉಪಾಧ್ಯಕ್ಷರು:– ಕಡತದಿಂದ ತೆಗೆದುಹಾಕಲಾಗಿದೆ. ನೀವು ಕುಳಿತುಕೊಳ್ಳಿ. ಶ್ರೀ ಕಳಕಪ್ಪ ಬಂಡಿಯವರೆ ಕುಳಿತುಕೊಳ್ಳಿ, ಅವರು ಉತ್ತರ ಕೊಡಲಿ.

(ಗೊಂದಲ)

ಉಪಾಧ್ಯಕ್ಷರು:– ಅವರು ಉತ್ತರ ಕೊಡಲಿ, ಡಾಕ್ಟರೆ, ನಂತರ ತಾವು ಮಾತನಾಡಿ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ:– ವಿವೇಕ – (xxx), whether it is parliamentary or un-parliamentary, ಸುಮ್ಮನೆ ಏಕಾಏಕಿ ತೆಗೆದುಹಾಕುತ್ತೇವೆಂದು ಹೇಳಬೇಡಿ. You verify whether it is parliamentary or un-parliamentary.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– (xxx) ಎನ್ನುವುದು parliamentary or un-parliamentary?

(ಗೊಂದಲ)

ಡಾ. ಹೆಚ್.ಸಿ.ಮಹದೇವಪ್ಪ:– subject to the verification…

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಯಾವುದಕ್ಕೆ ಯಾವುದನ್ನು defend ಮಾಡಬೇಕೋ ಅದನ್ನು ಮಾಡಬೇಕು. ಅವರು ಯಾವ ಅರ್ಥದಲ್ಲಿ ಹೇಳುತ್ತಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ. ಅವರು ಯಾವ ಪದಪ್ರಯೋಗ ಉಪಯೋಗಿಸಿದ್ದಾರೆ ಎಂಬುದನ್ನು ನೋಡಿ, whether it is parliamentary or un-parliamentary.

Dr.H.C.MAHADEVAPPA:- The words which are included in the parliamentary procedure, the words which are not included, you should give the list of those words. ನೀವು ಸುಮ್ಮನೆ ಏನೇನೋ ಮಾಡುವುದಕ್ಕೆ ಹೋಗಬೇಡಿ. ನಿಮಗೆ ಇಷ್ಟ ಬಂದ ಹಾಗೆ ಹೇಳಬೇಡಿ.

(ಗೊಂದಲ)

ಉಪಾಧ್ಯಕ್ಷರು:– ಸಚಿವರು ಉತ್ತರ ಕೊಡಲಿ. ಶಂಕರಲಿಂಗೇಗೌಡರೇ ತಾವು ಕುಳಿತುಕೊಳ್ಳಿ. ಅವರು ಉತ್ತರ ಕೊಡಲಿ.

ಶ್ರೀ ಹೆಚ್.ಸಿ. ಶಂಕರಲಿಂಗೇಗೌಡ:– ನನಗೆ ಉತ್ತರ ಬೇಡ.

ಉಪಾಧ್ಯಕ್ಷರು:– ಆಯಿತು ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜನಗರ ಕ್ಷೇತ್ರದ ಸದಸ್ಯರಾದಂತಹ ಶ್ರೀ ಶಂಕರಲಿಂಗೇಗೌಡರು...

(ಗೊಂದಲ)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಚಾಮರಾಜ ನಗರ ಅಲ್ಲ, ಚಾಮರಾಜ...

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಚಾಮರಾಜ ಕ್ಷೇತ್ರದ ಶಾಸಕರಾದಂತಹ, ನನ್ನ ಆತ್ಮೀಯ ಸ್ನೇಹಿತರಾದಂತಹ ಶಂಕರಲಿಂಗೇಗೌಡರು ಮತ್ತು ನಾನು ಇಬ್ಬರೂ 1994 ರಿಂದ ಈ ಸದನದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಅವರು ಮತ್ತು ನಾನು ಒಟ್ಟಿಗೆ ಆಯ್ಕೆಯಾಗುತ್ತಿದ್ದೇವೆ. ನಾವೆಲ್ಲಾ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಅವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಆ ಪ್ರಶ್ನೆ ಏನೆಂದರೆ ರಾಜ್ಯದಾದ್ಯಂತ 10ಕ್ಕಿಂತ ಕಡಿಮೆ ಇರುವ ಮತ್ತು 5ಕ್ಕಿಂತ ಕಡಿಮೆ ಇರುವ ಮಕ್ಕಳ ಸಂಖ್ಯೆ ಇರುವಂಥ ಶಾಲೆಗಳ ವಿವರಗಳನ್ನು ಕೇಳಿದ್ದಾರೆ. ಇಡೀ ರಾಜ್ಯದ ಶಾಲಾವಾರು ವಿವರಗಳೆಲ್ಲವನ್ನೂ ಕೊಡುವುದಕ್ಕೆ ಹೇಳಿದ್ದಾರೆ. ಈಗ ತಮಗೆಲ್ಲರಿಗೂ ಗೊತ್ತಿದ್ದಂತೆ ಈಗ ಪ್ರಶ್ನೆ ಕೊಡುವುದಕ್ಕೆ ಎಷ್ಟು ದಿನ ಅವಧಿ ಇತ್ತು ಎನ್ನುವುದು ಗೊತ್ತಿದೆ ಮತ್ತು ಅದಕ್ಕೆ ಉತ್ತರವನ್ನು ತರಿಸಬೇಕಾಗಿದೆ. ಹಾಗಾಗಿ ಇಡೀ ರಾಜ್ಯದಲ್ಲಿ ಈಗ ಶಾಲಾವಾರು ಕೇಳಿರುವುದರಿಂದ ಅಂದರೆ 5ಕ್ಕಿಂತ ಮತ್ತು 10ಕ್ಕಿಂತ ಕಡಿಮೆ ಇರುವ ಶಾಲೆಗಳ ವಿವರ ಕೇಳಿರುವುದರಿಂದ ನಾವು ಸಮಯಾವಕಾಶವನ್ನು ಕೇಳಿದ್ದೇವೆ. ಅದನ್ನು ಅವರಿಗೆ ದೊರಕಿಸಿ ಕೊಡುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ನಾನು ಕೇಳುತ್ತಿದ್ದೇನೆ 1 ತಿಂಗಳ ಕಾಲಾವಕಾಶ ಏಕೆ ಬೇಕು? ನಾವೆಲ್ಲಾ (xxx) ಆರಿಸಿ ಬಂದಿಲ್ಲ.

ಪ್ರಜೆಗಳಿಂದ ಆರಿಸಿ ಬಂದಿರುವುದು. (xxx) ಎಂದು ಹೇಳುವುದೇ ಮಹಾತಪ್ಪೇ? ನಾನು (xxx) ಎಂದು ಹೇಳಬೇಕೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಒಂದು ತಿಂಗಳ ಕಾಲಾವಕಾಶ ಬೇಕು. ಒಂದು ತಿಂಗಳೊಳಗೆ ತರಿಸಿಕೊಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಉನ್ನತ ಶಿಕ್ಷಣ ಸಚಿವರಿಲ್ಲವೇ? ಅವರು ಉತ್ತಮವಾಗಿ ಕೆಲಸ ಮಾಡುತ್ತಿಲ್ಲವೇ? ಈ ಇಲಾಖೆಯಲ್ಲಿ ಕೆಲಸವೇ ಆಗುತ್ತಿಲ್ಲ. ಏನು ಕೆಲಸ ಆಗುತ್ತಿದೆ? ಬೇರೆಯವನ್ನು ಟೀಕೆ ಮಾಡುವುದೇ?

ಉಪಾಧ್ಯಕ್ಷರು:– ಮಾನ್ಯ ಸಚಿವರೇ, ಈಗ ಕಂಪ್ಯೂಟರ್ ಯುಗ ನಡೆಯುತ್ತಿದೆ. ಮಾಹಿತಿ ತೆಗೆದುಕೊಳ್ಳುವುದಕ್ಕೆ ವಿಶೇಷ ಕಷ್ಟ ಇಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಇಲ್ಲ ಎಂದರೆ ನಾನು ಸಭಾತ್ಯಾಗ ಮಾಡಲೇ?

ಉಪಾಧ್ಯಕ್ಷರು:– 10ನೇ ತಾರೀಖಿನೊಳಗೆ, ಅಧಿವೇಶನ ಮುಗಿಯುವುದರೊಳಗೆ ತಾವು ಉತ್ತರ ಕೊಡುವಂಥ ವ್ಯವಸ್ಥೆ ಮಾಡಬೇಕು. ನಾನು ಸೂಚನೆ ಕೊಡುತ್ತಿದ್ದೇನೆ. ನೀವು ಕುಳಿತುಕೊಳ್ಳಿ.

ಉದ್ಯೋಗ ಖಾತರಿ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 23 (442)
ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ.ಡಿ.ಶೇಖರ (ಹೊಸದುರ್ಗ)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆಗಳು:

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು? (ವಿವರ ಒದಗಿಸುವುದು)

ಆ) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿಗೆ ಉದ್ಯೋಗ ಖಾತ್ರಿ